**ಓ ಎಸ್ 9/2021 ಪಿಡಬ್ಲ್ಯೂ1**

**ಸಾಕ್ಷಿಯನ್ನು ದಿಃ 03.07.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಪಿ ಎಸ್ ವಕೀಲರಿಂದಃ**

ಭೂ ಸ್ವಾಧೀನ ಮಾಡಿಕೊಂಡ ನಂತರ ಸರಿಯಾದ ಪರಿಹಾರ ನೀಡಿಲ್ಲವೆಂದು ಬಹಳ ಗಲಾಟೆ ನಡೆಯಿತು ಎಂದರೆ ಸರಿ. ಭೂಸ್ವಾಧೀನವು ಸರ್ವೆ ನಂ. 72/1 ಎ ನಲ್ಲಿ ಹೋಗಿದೆಯೇ ಹೊರತು ಸರ್ವೆ ನಂ. 72/1 ರಲ್ಲಿ ಅಲ್ಲ ಎಂದು ನಮ್ಮ ತಂದೆ ತಕರಾರು ಸಲ್ಲಿಸಿದ್ದರು. ತಹಶೀಲ್ದಾರ್, ಎ ಸಿ ಮತ್ತು ಘನ ಉಚ್ಚ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸಿದ್ದರು. 2009 ರಲ್ಲಿ ತಕರಾರು ಸಲ್ಲಿಸಿರಲಿಲ್ಲ. ಸಾಕ್ಷಿ ಮುಂದುವರಿದು ತನ್ನ ದೊಡ್ಡಪ್ಪ ಸಿ ಕೆ ದೇವೇಗೌಡರು ಭೂಸ್ವಾಧೀನಗೊಂಡಿರುವ ಜಾಗ ತನಗೆ ಸೇರಬೇಕೆಂದು ತಕರಾರು ಸಲ್ಲಿಸಿದ್ದರು ಮತ್ತು ತನ್ನ ತಂದೆ 3 ಜನಕ್ಕೂ ಸೇರಬೇಕು ಎಂದು ಹೇಳುತ್ತಾರೆ. ನನ್ನ ತಂದೆ ಹಾಗೆ ತಕರಾರು ಸಲ್ಲಿಸಿ ಒಂದೂವರೆ ಇಂದ 2 ವರ್ಷ ಆಗಿದೆ. ನಮ್ಮ ತಂದೆ ಅಜ್ಜಪಾಲಿನಲ್ಲಿ ಪಾಲು ಕೋರಿ ಕೇಸು ಹಾಕಿ ಎಷ್ಟು ವರ್ಷಗಳಾಗಿದೆ ಎಂದು ನನಗೆ ಗೊತ್ತಿಲ್ಲ. ಒಳಚರಂಡಿ ವ್ಯವಸ್ಥೆಗೆ ಸರ್ವೆ ನಂ. 72/1 ಎ ರಲ್ಲಿ 0.32 ಗುಂಟೆ ಪೈಕಿ 0.24 ಗುಂಟೆ ಜಮೀನು ಭೂಸ್ವಾಧೀನ ಆಗಿದೆ ಎಂಬ ಸಂಗತಿಯನ್ನು ದಾವಾ ಪತ್ರದಲ್ಲಿ ಪ್ರಾರಂಭದಲ್ಲಿಯೇ ತಿಳಿಸಿದ್ದರು. ನಮ್ಮ ತಂದೆಯು ಮೂಲತಃ ದಾವಾ ಪತ್ರವನ್ನು ಏನೆಂದು ಹೂಡಿದ್ದರು ಮತ್ತು ಆನಂತರ ಏನನ್ನು ತಿದ್ದುಪಡಿಗಳನ್ನು ಮಾಡಿಕೊಂಡಿದ್ದರು ಎಂದು ನನಗೆ ಗೊತ್ತಿದೆ. ಸಾಕ್ಷಿ ಮುಂದುವರಿದು ತನ್ನ ತಂದೆ ಯಾವುದೇ ತಿದ್ದುಪಡಿ ಮಾಡಿಲ್ಲ ಎಂದು ಹೇಳುತ್ತಾರೆ. ಭೂಸ್ವಾಧೀನಕ್ಕೆ ಸಂಬಂಧಿಸಿದ ಪರಿಹಾರ ಕುರಿತಂತೆ ನಮ್ಮ ತಂದೆ ಭೂಸ್ವಾಧೀನಾಧಿಕಾರಿಗಳಿಗೆ ಆಕ್ಷೇಪಣೆಯನ್ನು ಸಲ್ಲಿಸಿಲ್ಲ. ಸಾಕ್ಷಿ ಮುಂದುವರಿದು ಭೂ ಪರಿಹಾರವನ್ನು ಇನ್ನು ಮಂಜೂರು ಮಾಡಿಲ್ಲವಾದ ಕಾರಣ ಆಕ್ಷೇಪಣೆಯನ್ನು ಸಲ್ಲಿಸಿಲ್ಲ ಎಂದು ಹೇಳುತ್ತಾರೆ. ರೂ. 3 ಕೋಟಿ ಭೂ ಪರಿಹಾರ ನಿಗಧಿ ಮಾಡಿದ್ದಾರೆ. ಹಾಗೆ ನಿಗಧಿ ಮಾಡಿ 2

ವರ್ಷಗಳಾಗಿದೆ. ಹಾಗೆ ನಿಗಧಿ ಮಾಡಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಒಳಚರಂಡಿ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಂಡ ಭೂಮಿಗೆ ಪ್ರತಿ ಗುಂಟೆ ರೂ.6,976/- ಹಣವನ್ನು ಪರಿಹಾರ ಎಂದು ಎ ಸಿ/ಎಸ್ ಎಲ್ ಎ ಓ ರವರು ದಿನಾಂಕ 23.04.2011 ರಂದು ನಿಗಧಿಪಡಿಸಿದ್ದಾರೆ ಎಂದರೆ ಸರಿ. ಸದರಿ ಪರಿಹಾರದ ಹಣ ಸಾಲದು ಮತ್ತು ಹೆಚ್ಚಿನ ಪರಿಹಾರ ಬೇಕು ಎಂದು ಸಿ ಕೆ ದೇವೇಗೌಡರು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಪರಿಹಾರದ ಹಣವು ಸಾಲದು ಎಂದು ನನ್ನ ತಂದೆ ತಕರಾರು ಸಲ್ಲಿಸಿರಲಿಲ್ಲ. ಸಿ ಕೆ ದೇವೇಗೌಡರು ಸಲ್ಲಿಸಿದ ಆಕ್ಷೇಪಣಾ ಅರ್ಜಿಯ ಆಧಾರದ ಮೇಲೆ ಭೂಸ್ವಾಧೀನ ಪ್ರಕರಣವನ್ನು ಸಿವಿಲ್ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿದ್ದರು ಎಂದರೆ ಸರಿ. ಹಾಗೆ ಸಿವಿಲ್ ನ್ಯಾಯಾಲಯಕ್ಕೆ ಬಂದ ನಂತರ ಎಲ್ ಎ ಸಿ 3/2013 ಎಂದು ನೋಂದಣಿಯಾಗಿ ನ್ಯಾಯಾಲಯವು ಪ್ರತಿ ಚದರಡಿಗೆ ರೂ. 375/- ಪರಿಹಾರ ನೀಡಬೇಕು ಎಂದು ಆದೇಶ ಮಾಡಿದೆ ಎಂದರೆ ಸರಿ. ಸದರಿ ಆದೇಶದ ವಿರುದ್ಧ ಎಸ್ ಎಲ್ ಎ ಓ ಮತ್ತು ಪುರಸಭೆಯವರು ಘನ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ಇರಬಹುದು. ಎಲ್ ಎ ಸಿ 3/2013 ರಲ್ಲಿ ನಮ್ಮ ತಂದೆ ಆಕ್ಷೇಪಣೆ ಸಲ್ಲಿಸಿಲ್ಲ, ನನ್ನ ದೊಡ್ಡಪ್ಪನವರೇ ನೋಡಿಕೊಳ್ಳುತ್ತಿದ್ದರು. ನಮ್ಮ ತಂದೆಗಾಗಲೀ, ನಮ್ಮ ಚಿಕ್ಕಪ್ಪನಿಗಾಗಲೀ ಸರಿಯಾದ ಮಾಹಿತಿ ಇಲ್ಲದೆ ಇದ್ದ ಕಾರಣ ದರಖಾಸ್ತು ಮೂಲಕ ಬಂದಿದ್ದ ಜಮೀನು ಸ್ವಾಧೀನಕೊಳ್ಳಗಾಗದೆ ಅಜ್ಜಪಾಲಿನ 0.32 ಗುಂಟೆ ಜಮೀನಿನ ಪೈಕಿ ಸ್ವಾಧೀನಗೊಂಡಿದೆ ಎಂದು ತಕರಾರು ಅರ್ಜಿ ಸಲ್ಲಿಸಿಲ್ಲ. ಮೇಲ್ಮನವಿ ಸಲ್ಲಿಸಿದ ನಂತರ ಭೂಮಾಲೀಕರು ಹಾಗೂ ಎ ಸಿ ಮತ್ತು ಪುರಸಭೆಯವರು ಸಭೆ ಸೇರಿ ಚರ್ಚಿಸಿ ಪ್ರತಿ ಗುಂಟೆಗೆ ರೂ.10 ಲಕ್ಷ ಪರಿಹಾರ ನಿಗಧಿ ಮಾಡಿದ್ದರು ಎಂದರೆ ಅದು ನನ್ನ ದೊಡ್ಡಪ್ಪನಿಗೆ ಗೊತ್ತಿದೆ. ಹಾಗೆ ತೀರ್ಮಾನವಾದ ನಂತರ ಯಾವ ಜಮೀನು ಭೂಸ್ವಾಧೀನಕ್ಕೆ ಒಳಗಾಗಿದೆ ಎಂದು ಹೇಳಿ ನಮ್ಮ ತಂದೆ ತಕರಾರು ತೆಗೆದುಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ಭೂಸ್ವಾಧೀನಗೊಂಡಿರುವ ಆಸ್ತಿಯ ಸರ್ವೆ ನಂಬರು

ಸಿ ಕೆ ದೇವೇಗೌಡರಿಗೆ ಸೇರಿದ ಸರ್ವೆ ನಂ 72/1 ಆಗಿದೆಯೇ ಹೊರತು ಅಜ್ಜಪಾಲಿನ ಆಸ್ತಿಯಾದ ಸರ್ವೆ ನಂ. 72/1 ಎ ಅಲ್ಲ ಎಂದರೆ ಸರಿಯಲ್ಲ. ದಾಖಲೆಗಳನ್ನು ಸೃಷ್ಟಿ ಮಾಡಿದ್ದಾರೆ ಎಂದು ನಮ್ಮ ತಂದೆ ಈ ನ್ಯಾಯಾಲಯದ ಹೊರತಾಗಿಯೂ ಬೇರೆ ಕಡೆ ಕೇಸು ಹಾಕಿದ್ದಾರೆ. ಇಲ್ಲೇ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದಾರೆ. ಆ ಕೇಸಿನ ಸಂಖ್ಯೆ ನೆನಪಿಲ್ಲ. ಸಿ ಕೆ ದೇವೇಗೌಡರು ಮತ್ತು ಅವರ ಹೆಂಡತಿ ಮಕ್ಕಳು ಅಮಲ್ಜಾರಿ ಸಂಖ್ಯೆ 27/2021 ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಆ ಅರ್ಜಿಯಲ್ಲಿ ತನ್ನನ್ನು ಪಕ್ಷಕಾರರಾಗಿ ಸೇರಿಸಿಕೊಳ್ಳುವಂತೆ ನನ್ನ ತಂದೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಆ ಅರ್ಜಿಯನ್ನು ನ್ಯಾಯಾಲಯ ವಜಾ ಮಾಡಿದೆ ಎಂದರೆ ಸರಿ. ನಮ್ಮ ಚಿಕ್ಕಪ್ಪ ನಾಗರಾಜುರವರು ದಿನಾಂಕ 20.06.2020 ರಂದು ನೋಟೀಸು ಕೊಟ್ಟಿದ್ದರು ಎಂದರೆ ಸರಿ. ಆಸ್ತಿ ಅವರಿಗೆ ಮಾತ್ರ ಸೇರಬೇಕಾಗಿದೆಯೇ ಹೊರತು ನಮಗೆ ಸೇರಬೇಕಾಗಿಲ್ಲ ಎಂದು ನೋಟೀಸು ಕೊಟ್ಟಿದ್ದರು. ಭೂಸ್ವಾಧೀನಗೊಂಡಿರುವ ಆಸ್ತಿಯಲ್ಲಿ ನಮ್ಮ ತಂದೆಗಾಗಲೀ ನಮ್ಮ ಚಿಕ್ಕಪ್ಪ ನಾಗರಾಜುರವರಿಗಾಗಲೀ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಪಾಂಡವಪುರ**